# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ಕೇಸ್ ನಂ. 36/2014**

**ದೋ.ಸಾ. : 40 ಫ್ರಾ.ಸಾ. :40**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಗೀತಾ ಲಕ್ಷ್ಮೀ |
| ಗಂಡನ ಹೆಸರು | : | ಡಾಃ ಸತ್ಯಮೂರ್ತಿ ಕುಂಬ್ಳೆ |
| ವಯಸ್ಸು | : | 49 ವರ್ಷ |
| ಕೆಲಸ | : | ಸಹಾಯಕ ನಿರ್ದೇಶಕರು, ಜೀವಶಾಸ್ತ್ರ ವಿಭಾಗ ಆರ್.ಎಫ್.ಎಸ್.ಎಲ್., ಮಂಗಳೂರು. |
| ವಾಸ | : | ಮಂಗಳೂರು |

**ದಿನಾಂಕಃ 10-07-2025 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2012 ರಿಂದ 2020 ಮಾರ್ಚ್ ವರೆಗೆ ನಾನು ಮಂಗಳೂರಿನ ಆರ್.ಎಫ್.ಎಸ್.ಎಲ್ ನಲ್ಲಿ ಜೀವಶಾಸ್ತ್ರ ವಿಭಾಗದಲ್ಲಿ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಹಾಗೂ 2020 ರಿಂದ ಇಲ್ಲಿಯ ವರೆಗೆ ಜೀವಶಾಸ್ತ್ರ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಇದುವರೆಗೂ ಸುಮಾರು 4500 ಕಲೆಗಳ ಪ್ರಕರಣಗಳಲ್ಲಿ ಹಾಗೂ 3500 ಸಿರಾಲೊಜಿ ಪ್ರಕರಣಗಳಲ್ಲಿ ಪರೀಕ್ಷೆಗಳನ್ನು ಮಾಡಿ, ವರದಿಗಳನ್ನು ನೀಡಿರುತ್ತೇನೆ ಹಾಗೂ ಇಲ್ಲಿಯ ವರೆಗೆ ಸುಮಾರು 1000 ಪ್ರಕರಣಗಳಲ್ಲಿ ನಾನು ಸಾಕ್ಷಿ ನೀಡಿರುತ್ತೇನೆ.

2. ದಿಃ 26-03-2014 ರಂದು ಕದ್ರಾ ಪೊಲೀಸ್ ಠಾಣೆಯ ಗುನ್ನಾ ನಂಃ 5/2014 ಕ್ಕೆ ಸಂಬಂಧಪಟ್ಟಂತೆ 27 ಮೊಹರು ಮಾಡಿದ ವಸ್ತುಗಳನ್ನು ಚಾಸಾ-53/ ಹೆಚ್.ಸಿ.-53- ಗೋವಿಂದ ರಾಜ ರವರು ತಮ್ಮ ಮೇಲಾಧಿಕಾರಿಗಳ ಕೋರಿಕೆಯ ಪತ್ರದೊಂದಿಗೆ ನಮ್ಮ ಪ್ರಯೋಗಾಲಯಕ್ಕೆ ತಂದಿದ್ದು, ಅದನ್ನು ನಮ್ಮ ಪ್ರಯೋಗಾಲಯದ ಸ್ವೀಕೃತಿ ವಿಭಾಗದವರು ಪಡೆದುಕೊಂಡು, ಅದೇ ದಿನ ನನಗೆ ನೀಡಿರುತ್ತಾರೆ. ನಾನು ಪಡೆದಕೊಂಡು ವಸ್ತುಗಳನ್ನು

ಪರಿಶೀಲಿಸಿ ನೋಡಿದಾಗ ಅವುಗಳು ಸುಸ್ಥಿತಿಯಲ್ಲಿ ಇದ್ದವು ಹಾಗೂ ಸದರಿ ವಸ್ತುಗಳಿಗೆ ಹಾಕಿದ್ದ ಮೊಹರು ಸಹ ಮಾದರಿ ಮೊಹರಿಗೆ ತಾಳೆಯಾಗುತ್ತಿತ್ತು. ಸದರಿ ವಸ್ತುಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗಾಗಿ ತೆರೆದು ನೋಡಿದಾಗ, ತನಿಖಾಧಿಕಾರಿಯು ಗುರುತಿನ ಸಂಖ್ಯೆ: 1) 1A1 ರಲ್ಲಿ ರಕ್ತದ ಕಲೆಗಳು ಇರುವ ಸಿಮೆಂಟಿನ ಚೂರುಗಳು,

2) 1A2 ರಲ್ಲಿ ಮಾದರಿ ಸಿಮೆಂಟಿನ ಚೂರುಗಳು,

3) 1A3 ರಲ್ಲಿ ರಕ್ತದ ಕಲೆಗಳು ಇರುವ ಸಿಮೆಂಟಿನ ಚೂರುಗಳು,

4) 1A4 ರಲ್ಲಿ ಮಾದರಿ ಸಿಮೆಂಟಿನ ಚೂರುಗಳು,

5) 1A5 ರಲ್ಲಿ ರಕ್ತದ ಕಲೆಗಳು ಇರುವ ಎಲೆಗಳು

6) 1A6 ರಲ್ಲಿ ಮಾದರಿ ಎಲೆಗಳು

7) 1A7 ರಲ್ಲಿ ರಕ್ತ ಮಿಶ್ರಿತ ಮಣ್ಣು

8) 1A8 ರಲ್ಲಿ ಮಾದರಿ ಮಣ್ಣು

9) 1A9 ರಲ್ಲಿ ರಕ್ತದ ಕಲೆಗಳು ಇರುವ ಎಲೆಗಳು

10) 1A10 ರಲ್ಲಿ ಮಾದರಿ ಎಲೆಗಳು

11) 1A11 ರಕ್ತ ಮಿಶ್ರಿತ ಮಣ್ಣು

12) 1A12 ರಲ್ಲಿ ಮಾದರಿ ಮಣ್ಣು

13) 3C1 ರಲ್ಲಿ ಒಂದು ಫ್ರಾಕ್

14) 3C2 ರಲ್ಲಿ ಒಂದು ಒಳ ಫ್ರಾಕ್

15) 3C3 ರಲ್ಲಿ ಒಂದು ಟೈಟ್ಸ್ (ಶಾರ್ಟ್ಸ್)

16) 4D1 ರಲ್ಲಿ ಒಂದು ಹಾಫ್ ಪ್ಯಾಂಟ್ (ಚಡ್ಡಿ)

17) 4D2 ರಲ್ಲಿ ಒಂದು ಶರ್ಟ್

18) 5E1 ರಲ್ಲಿ ಒಂದು ಶರ್ಟ್

19) 5E2 ರಲ್ಲಿ ಒಂದು ಲುಂಗಿ

20) 5E3 ರಲ್ಲಿ ಒಂದು ಅಂಡರ್ ವೇರ್

21) 6F1 ರಲ್ಲಿ ಒಂದು ಸ್ವೆಟರ್

22) 6F2 ರಲ್ಲಿ ಒಂದು ಸೀರೆ

23) 6F3 ರಲ್ಲಿ ಒಂದು ಲಂಗ

24) 6F4 ರಲ್ಲಿ ಒಂದು ಬೌಸ್

25) 7G1 ರಲ್ಲಿ ಒಂದು ಕತ್ತಿ

26) 7G2 ರಲ್ಲಿ ಒಂದು ಟೀ ಶರ್ಟ್

27) 7G3 ರಲ್ಲಿ ಒಂದು ಚಡ್ಡಿ

ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೊಳಪಡಿಸಿ ನೋಡಿದಾಗ ವಸ್ತು ಸಂಖ್ಯೆ 1A4 ರನ್ನು ಹೊರತುಪಡಿಸಿ, ಉಳಿದ ಎಲ್ಲಾ ವಸ್ತುಗಳಲ್ಲಿ ರಕ್ತದ ಕಲೆಗಳು ಕಂಡುಬಂದಿರುತ್ತದೆ. ಸದರಿ ರಕ್ತದ ಕಲೆಗಳನ್ನು ಮುಂದಿನ ಸಿರೊಲಜಿ ಪರೀಕ್ಷೆಗಾಗಿ ಸಂಗ್ರಹಿಸಿಡಲಾಯಿತು ಹಾಗೂ ಉಳಿದ ವಸ್ತುಗಳನ್ನು ಪ್ಯಾಕ್ ಮಾಡಿ, ಸೀಲು ಮಾಡಿ, ತನಿಖಾಧಿಕಾರಿಗಳಿಗೆ ಮೊಹರಿನೊಂದಿಗೆ ನೀಡಿರುತ್ತೇನೆ. ಈಗ ನನಗೆ ತೋರಿಸಿದ ದಾಖಲೆಯು ನಾನು ನೀಡಿರುವ ವರದಿಯಾಗಿರುತ್ತದೆ. ಸದರಿ ವರದಿಯನ್ನು ನಿಪಿ-89 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-89(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯ ಮೇಲೆ ಮಾದರಿ ಮೊಹರು ಇರುತ್ತದೆ. ಅದನ್ನು ನಿಪಿ-90 ಎಂದು, ಸಾಕ್ಷಿಯ ಸಹಿಯನ್ನು ನಿಪಿ-90(ಎ) ಎಂದು ಗುರುತಿಸಲಾಯಿತು.

3. ಆನಂತರ ನಾನು ಸಂಗ್ರಹಿಸಿದ್ದ ರಕ್ತದ ಕಲೆಗಳನ್ನು ಸಿರಾಲೊಜಿ ಪರೀಕ್ಷೆಗೆ ಒಳಪಡಿಸಿ ನೋಡಿದಾಗ, ವಸ್ತು ಸಂಖ್ಯೆ 1A1, 1A3, 1A5 ರಿಂದ 1A12, 3C1 ರಿಂದ 3C3, 4D1, 4D2, 5E1 ರಿಂದ 5E3, 6F1 ರಿಂದ 6F4, 7G1 ರಿಂದ 7G3 ರಲ್ಲಿದ್ದ ರಕ್ತದ ಕಲೆಗಳು ಮಾನವನ ರಕ್ತದ ಕಲೆಗಳು ಆಗಿರುತ್ತವೆ ಮತ್ತು ವಸ್ತು ಸಂಖ್ಯೆ 1A2 ರಲ್ಲಿ ಸಾಕಷ್ಟು ರಕ್ತದ ಕಲೆಗಳು ಇಲ್ಲದ ಕಾರಣ, ಅದರ ಮೂಲ ಮತ್ತು ಗುಂಪನ್ನು ವರ್ಗೀಕರಿಸಲು ಸಾಧ್ಯವಾಗಿರುವುದಿಲ್ಲ.

4. ವಸ್ತು ಸಂಖ್ಯೆ 1A1, 1A5, 1A7, 1A9 ರಿಂದ 1A11, 3C1, 3C2, 3C3, 4D1, 4D2, 5E1 ರಿಂದ 5E3, 7G1 ರಿಂದ 7G3 ರಲ್ಲಿರುವ ರಕ್ತದ ಕಲೆಗಳು 'A' ಮತ್ತು 'B' ಗುಂಪಿಗೆ ಸೇರಿದ ರಕ್ತದ ಕಲೆಗಳಾಗಿರುತ್ತವೆ. ವಸ್ತುಸಂಖ್ಯೆ 6F1 ರಿಂದ 6F4 ರಲ್ಲಿರುವ ರಕ್ತ, ಕಲೆಗಳು 'O' ಗುಂಪಿಗೆ ಸೇರಿದ ರಕ್ತದ ಕಲೆಗಳಾಗಿರುತ್ತವೆ. ವಸ್ತು ಸಂಖ್ಯೆ 1A3, 1A6, 1A8 ಹಾಗೂ 1A12 ರಲ್ಲಿರುವ ರಕ್ತದ ಕಲೆಗಳ ಗುಂಪನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಸದರಿ

ವಸ್ತುಗಳಲ್ಲಿ ರಕ್ತದ ಕಲೆಗಳು ಒಣಗಿದ್ದರಿಂದ ಆರ್.ಹೆಚ್. ಫ್ಯಾಕ್ಟರ್ ನ ಗುಣಲಕ್ಷಣಗಳು ನಾಶವಾಗಿರುತ್ತವೆ, ಆದ್ದರಿಂದ ಅವುಗಳ ಆರ್.ಹೆಚ್. ಫ್ಯಾಕ್ಟರ್ ಕಂಡುಹಿಡಿಯಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ನಾನು ಸಿರಾಲೊಜಿ ವರದಿಯನ್ನು ನೀಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಗೆ ಪ್ರಕರಣವನ್ನು ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.